## 3. ಕಾರ್ಗಿಲ್ ವಿಜಯ ದಿವಸ

ಇಂದು ಅಂದರೆ ದಿನಾಂಕ:26.07.2020ರಂದು ಕಾರ್ಗಿಲ್ ವಿಜಯ ದಿವಸ. ಹಿಮ ತುಂಬಿದ ಹಿಮಾಲಯದ ಗಡಿಗಳನ್ನು ಕಾಯುತ್ತಿರುವ ನಮ್ಮ ಸೈನಿಕರ ಶೌರ್ಯವನ್ನು ನೆನಪಿಸಿಕೊಳ್ಳುವ ದಿನ. ನಮ್ಮ ಸೈನ್ಯದ 527 ಸೈನಿಕರ ಬಲಿದಾನದ ಮೂಲಕ, ಕಾರ್ಗಿಲ್ ಯುದ್ಧದಲ್ಲಿ ಪಾಕಿಸ್ತಾನವನ್ನು ಸೋಲಿಸಿದೆವು. ಅದಕ್ಕೂ ಮುಂಚೆ 1984ರಲ್ಲಿ ಸಿಯಾಚಿನ್ ಪ್ರದೇಶದಲ್ಲಿ ನಮ್ಮವರು ಪಾಕಿಸ್ತಾನಕ್ಕೆ ತಕ್ಕ ಪಾಠ ಕಲಿಸಿದ್ದರು. ಗಡಿಯಲ್ಲಿ ಮೈಯೆಲ್ಲಾ ಕಣ್ಣಾಗಿ ಕುಳಿತು ಹಿಮಗಾಳಿಯ ನಡುವೆ ತೂರಿಬರಬಹುದಾದ ಗುಂಡಿನ ಮೊರೆತವನ್ನೆದುರಿಸಲು ಸದಾ ಸಿದ್ಧರಾಗಿ, ಗಡಿ ಕಾಯುತ್ತಿರುವ ನಮ್ಮ ಸೈನಿಕರ ಕರ್ತವ್ಯಕ್ಕೆ ಬೆಲೆ ಕಟ್ಟಲು ಸಾಧ್ಯವೇ.

**ಸಿಯಾಚಿನ್‌ನಲ್ಲಿ ಹಿಮಪಾತದಿಂದ ನಾಲ್ವರು ಯೋಧರ ಸಾವು:** ಇಂಥ ವರದಿಗಳು ಹಾಗಾಗ ಬಿತ್ತರವಾಗುತ್ತಿರುತ್ತವೆ. ಈ ಪ್ರದೇಶದಲ್ಲಿ ನಿಯೋಜನೆಯಾಗುವ ಸೈನಿಕ ಸದಾ ಲಾಕ್‌ಡೌನ್‌ನಲ್ಲಿಯೇ ಇರುತ್ತಾನೆ. ಯಾಕೆಂದರೆ ಎಂತಹ ಸ್ಥಿತಿಯಲ್ಲಿಯೂ ಹವಾಮಾನವೆಂಬುದು ಒಂದು ಡಿಗ್ರಿಗಿಂತ ಎಂದೂ ಮೇಲೆದ್ದದ್ದು ಇಲ್ಲ. ಇದರಿಂದಾಗಿ ಸದಾ ಕಣ್ಮುಂದೆ ಚೆಲ್ಲಿರುವ ರಾಶಿ ರಾಶಿ ಹಿಮ, ಈ ಸೇನಾ ಡೇರೆಯಲ್ಲಿ ಕುಳಿತ ಸೈನಿಕ ಹಿಮ ಮತ್ತು ಸದಾ ಹಿಮವನ್ನಷ್ಟೇ ನೋಡುತ್ತಿರಬೇಕು. ವಾರಕ್ಕಾಗುವಷ್ಟು ಆಹಾರ ಒಮ್ಮೆಲೆ ಪೂರೈಸಲಾಗುತ್ತದೆ. ಮಾತನಾಡಲು ಒಂದು ನರಪಿಳ್ಳೆಯೂ ಸಿಗುವುದಿಲ್ಲ. 11 ಸಾವಿರ ಅಡಿಯಲ್ಲಿರುವ ಸಿಯಾಚಿನ್ ಬೇಸ್ ತನಕ ಮಾತ್ರ ಸಾರ್ವಜನಿಕ ಪ್ರದೇಶಕ್ಕೆ ಅನುಮತಿ. ಸಿಯಾಚಿನ್ ನೀರ್ಗಲ್ಲು ಹಿಮಾಲಯದ ಕರಕೊರಂ ಪರ್ವತ ಶ್ರೇಣಿಯಲ್ಲಿದೆ. ಸಮುದ್ರ ಮಟ್ಟದಿಂದ 20,000 ಸಾವಿರ ಅಡಿ ಎತ್ತರದಲ್ಲಿರುವ ಭೂಮಿಯ ಮೇಲಿನ ಅತೀ ಎತ್ತರದ ಯುದ್ಧಭೂಮಿ ಎಂಬ ಹೆಗ್ಗಳಿಕೆ ಇದರದ್ದು. ಚಳಿಗಾಲದಲ್ಲಿ ಇಲ್ಲಿ 1,000 ಸೆಂ.ಮೀ.ನಷ್ಟು ಹಿಮಪಾತವಾಗುತ್ತದೆ. ಇಲ್ಲಿನ ತಾಪಮಾನ 60 ಡಿಗ್ರಿ ಇರುತ್ತದೆ. ಬಾಲ್ಟೀ ಭಾಷೆಯಲ್ಲಿ ಸಿಯಾ ಎಂದರೆ ಗುಲಾಬಿ ಜಾತಿಗೆ ಸೇರಿದ ಒಂದು ಹೂ, ಚನ್ ಎಂದರೆ ಹೇರಳವಾಗಿ ಸಿಗುವ ಎಂದರ್ಥ ಆದರೆ ಸಿಯಾಚಿನ್‌ನಲ್ಲಿ ಇಂದು ಯಾವುದೇ ಗಿಡಮರಗಳಿಲ್ಲ. ಅಲ್ಲಿರುವುದು ಕೇವಲ ಕ್ರೂರ ಹಿಮ, ಹಿಮಗಾಳಿ.

ಈ ಪ್ರದೇಶಕ್ಕಾಗಿ ನಡೆದ ಸಂಘರ್ಷಗಳ ಪಟ್ಟಿಯೂ ಇಲ್ಲಿನ ಶೀತಲದಷ್ಟೇ ಆಳವಾಗಿದೆ. 1949ರ ಕರಾಚಿ ಮತ್ತು 1972ರ ಶಿಮ್ಲಾ ಒಪ್ಪಂದದಲ್ಲಿ ಮನುಷ್ಯ ವಾಸಕ್ಕೆ ಯೋಗ್ಯವಲ್ಲದ ಪ್ರದೇಶ ಎಂದು ವಿವರಿಸಲಾಗಿದೆ. 1970 ರಿಂದ 1980ರ ವರೆಗೆ ಪಾಕಿಸ್ತಾನ ಸಿಯಾಚಿನ್ ತಪ್ಪಲಿನಲ್ಲಿ ಗಸ್ತು ನಡೆಸುತ್ತಿತ್ತು. ಏಪ್ರಿಲ್ 1984ರ ಪಾಕಿಸ್ತಾನದ ಕಡೆಯಿಂದ ಶಿಮ್ಲಾ ಒಪ್ಪಂದ ಉಲ್ಲಂಘನೆಯಾಗಿ ಈ ಪ್ರದೇಶದ ಮೇಲೆ ಹತೋಟಿ ಸಾಧಿಸಲು ಪ್ರಯತ್ನಿಸಿತ್ತು. 1987ರ ಆಪರೇಷನ್ ರಾಜೀವ್ ನಡೆಸಲಾಯಿತು ಮತ್ತು ಪಾಕಿಸ್ತಾನದ ವಶದಲ್ಲಿದ್ದ ಕ್ವೈದ್ ಪೋಸ್ಟ್‌ನ್ನು ಜೂನ್‌ನಲ್ಲಿ ವಶಪಡಿಸಿಕೊಳ್ಳಲಾಯಿತು. ಆದರೆ ಜನರಲ್ ಪರ್ವೇಜ್ ಮುಷರಫ್ ನೇತೃತ್ವದಲ್ಲಿ 1987ರಲ್ಲಿ ಮತ್ತೆ ಅಪರೇಷನ್ ಕ್ವೈದತ್ ನಡೆಸಿ ಮರು ಆಕ್ರಮಣ ಮಾಡಿತು. ಇದಕ್ಕೆ ಪ್ರತ್ಯುತ್ತರವಾಗಿ ಆಪರೇಷನ್ ವಜ್ರಶಕ್ತಿ ನಡೆಸಿದ ನಮ್ಮ ದೇಶದ ಸೇನೆ, ಪಾಕಿಗಳ ಸೈನಿಕರನ್ನು ಹಿಮ್ಮೆಟ್ಟಿಸಿತು. ತ್ರಿಶೂಲ್ ಹಾಗೂ 1989ರ ಅಪರೇಷನ್ ಐಬೆಕ್ಸ್, 1992ರ ಆಪರೇಷನ್ ತ್ರಿಶೂಲ್ ಹಾಗೂ 1995ರ ಸಾಲ್ತಾರೂ ರೇಖೆಯ ಬಳಿ ಪಾಕಿಸ್ತಾನದ ದಾಳಿ ವಿಫಲಗೊಳಿಸಿತು. ಇವೆಲ್ಲ ಹಿನ್ನೆಲೆಯಿಂದ ಪಾಕಿಸ್ತಾನದ ಆಕ್ರಮಣಕಾರಿ ಮನೋಭಾವವು. ತನ್ನ ಕ್ರೂರ ಮುಖವನ್ನು ತೋರಿದ್ದು 1999ರಲ್ಲಿ ಅದರಿಂದಲೇ ಹೊರಹೊಮ್ಮಿದ್ದು ಕಾರ್ಗಿಲ್ ಯುದ್ದ ಹೀಗೆ ಸಾಲು ಸಾಲು ಯುದ್ಧಗಳು. ಪಾಕಿಸ್ತಾನದ ಸೇನೆಗೆ ತಕ್ಕ ಪಾಠ ಕಲಿಸಿದ್ದು ಭಾರತದ ಸಾಧನೆ.

**ಸಿಯಾಚಿನ್ ಎಂಬ ಕಠಿಣ ತಾಣ:** 1984ರ ಸಿಯಾಚಿನ್ ಘರ್ಷಣೆಯ ಬಳಿಕ, ಈಗ ಸಿಯಾಚಿನ್ ನೀರ್ಗಲ್ಲು ಪ್ರದೇಶದ 76 ಕಿ.ಮೀ. ದೂರದವರೆಗೆ ಮತ್ತು ಸಾಲ್ತಾರೋ ಪಾಸ್‌ನ ತುದಿಯನ್ನು ಭಾರತ ನಿಯಂತ್ರಿಸುತ್ತಿದೆ. ತನ್ನ ವ್ಯಾಪ್ತಿ 900 ಚದರ ಮೈಲು ಪ್ರದೇಶವನ್ನು ಭಾರತ ಆಕ್ರಮಿಸಿರುವುದಾಗಿ ಪ್ರತಿಪಾದಿಸುತ್ತಿರುವ ಪಾಕಿಸ್ತಾನ ತನ್ನ ಹಠವನ್ನು ಬಿಟ್ಟಿಲ್ಲ. ಆದರೆ ಭಾರತ ಸೂಚಿಸಿರುವ ಗಡಿ ರೇಖೆ ಒಪ್ಪಿಕೊಳ್ಳುವವರೆಗೂ ಸಿಯಾಚಿನ್‌ನಲ್ಲಿರುವ ಸೇನೆಯನ್ನು ಹಿಂದೆಗೆಯದಿರಲು ನಿರ್ಧರಿಸಲಾಗಿದೆ. 1984ರಲ್ಲಿ ಇಲ್ಲಿ ಘರ್ಷಣೆ ನಡೆದಾಗ, ಜಗತ್ತಿನ ಅತಿ ಎತ್ತರದ ಮಟ್ಟದಿಂದ ಸರಾಸರಿ 20,000 ಅಡಿ ಎತ್ತರದ ಆ ಪ್ರದೇಶದಲ್ಲಿ ನಮ್ಮ ನಿಮ್ಮಂತಹ ಸಾಮಾನ್ಯ ಜನರು ನಾಲ್ಕಾರು ಹೆಜ್ಜೆ ನಡೆದರೆ, ಏದುಸಿರು ಬರುತ್ತದೆ. ಪ್ರತಿ ದಿನದ ನಿರ್ವಹಣೆಗೆ ಇಲ್ಲಿ ರೂ.5 ಕೋಟಿಗೂ ಹೆಚ್ಚು ವ್ಯಯವಾಗುತ್ತಿದ್ದು, ಯೋಧರ ಜೀವಗಳಿಗೆ ಸಂಬಂಧಿಸಿದಂತೆಯೂ ಈ ವೆಚ್ಚ ದುಬಾರಿ ಎನಿಸಿದ್ದರೂ, ಇದು ಭಾರತದ ರಕ್ಷಣೆಯ ಬೃಹತ್ ಗೋಡೆಯಂತೆ ಇರುವುದರಿಂದ ಅನಿವಾರ್ಯ ಎನಿಸಿದೆ.

ಸಿಯಾಚಿನ್ ಪ್ರದೇಶದಲ್ಲಿ ಯುದ್ಧದಲ್ಲಿ ಮಡಿದವರಿಗಿಂತ ಹಿಮ ಚಳಿಯ ಹೊಡೆತಕ್ಕೆ ಮೃತಪಟ್ಟವರೇ ಹೆಚ್ಚು. ಕೊರೆಯುವ ಶೀತಲದಲ್ಲಿ ಶೂನ್ಯವನ್ನು ದಿಟ್ಟಿಸುತ್ತಾ ಕುಳಿತಿರುವುದು, ಅದೂ ಮೈಯೆಲ್ಲಾ ಕಣ್ಣಾಗಿ, ಏನಿರಬಹುದು ಆ ಸೈನಿಕರ ಬಳಿ, ಜೇಬು ತಡಕಿದರೆ, ಅಮ್ಮ ಕೊಟ್ಟ ತಾಯತ, ಅಪ್ಪ ಕೊಟ್ಟ ದೇವರ ಫೋಟೋ, ತಂಗಿ ಕಟ್ಟಿದ ರಾಖಿ, ಎದೆಯಲಿ ಬೆಂಕಿ ಹೊತ್ತಿಸುವ ಯಾರದ್ದೋ ಅಕ್ಷರದ ಕಾಗದದ ತುಣುಕು, ಇವುಗಳೇ ಜೀವತುಂಬುವ ಸಾಧನೆಗಳು.

**ಊಟ ಸೇರದ ಜಾಗ:** ಸೈನಿಕರ ವಲಯದಲ್ಲಿ ಸಿಯಾಚಿನ್ ನೆಲೆಯಲ್ಲಿ ನಿಯೋಜನೆಗೊಳ್ಳುವುದನ್ನು ಬಹು ಕಠಿಣ ಡ್ಯೂಟಿ ಎಂದೇ ಪರಿಗಣಿಸಲಾಗುತ್ತದೆ. ಇಲ್ಲಿ ಕರ್ತವ್ಯ ನಿರ್ವಹಿಸುವ ಸೈನಿಕ ಶತ್ರುವಿನೊಂದಿಗೆ ಹೊಡೆದಾಡುವುದಕ್ಕಿಂತ ಪ್ರಕೃತಿಯೊಂದಿಗೆ ಸೆಣೆಸುವುದೇ ಹೆಚ್ಚು. ಸತತ ಶೀತ, ಗಾಳಿಗೆ ಕೆಲವು ಸೆಕೆಂಡು ತೆರೆದುಕೊಂಡರೆ ಸಾಕು ಆ ಭಾಗ ಪೂರ್ತಿ ಮರಗಟ್ಟಿ ಹೋಗುತ್ತದೆ. ಸತತ ಹೀಗೆ ಕಾರ್ಯನಿರ್ವಹಿಸುವುದರಿಂದ ಎಲ್ಲಿದ್ದೇವೆಂಬ ಅರಿವು ಅಳಿದು, ಅಜೀರ್ಣ ಮೊದಲಾದ ಹಲವಾರು ಆರೋಗ್ಯ ವ್ಯತ್ಯಯಗಳಾಗುತ್ತವೆ. ಇಲ್ಲಿದ್ದುಕೊಂಡು ಊಟ ಮಾಡುವುದೇ ಒಂದು ಶಿಕ್ಷೆ ಎನಿಸುವಂತಹ ವಾತಾವರಣ. ಆದ್ದರಿಂದ ಇಲ್ಲಿ ನಿಯೋಜನೆಗೊಂಡ ಸೈನಿಕರ ಕೆಲವು ವಾರಗಳ ನಂತರ, ಕೆಳ ಮಟ್ಟದ ಶಿಬಿರಗಳಿಗೆ ಬಂದು, ಇನ್ನೊಂದು ತಂಡ ಹಿಮದೊಡನೆ ಹೋರಾಡಲು ಹೊರಡುತ್ತಾರೆ. ಅದು ಅನಿವಾರ್ಯ ಸಹ, ನಮ್ಮ ಸೈನಿಕರ ಆರೋಗ್ಯ ಕಾಪಾಡಲು ಹೆಚ್ಚು ಕಾಲ ಆ ಕ್ರೂರ ಹವಾಮಾನದಲ್ಲಿ ಅವರನ್ನು ಬಿಡುವುದಿಲ್ಲ.

ಆರು ದಿನಗಳ ಕಾಲ ಇದೇ ಸಿಯಾಚಿನ್ ಪ್ರದೇಶದ ಹಿಮರಾಶಿಯಲ್ಲಿ ಹೂತು ಹೋಗಿ, ಸಹಾಯ ಮಾಡಲು ಧಾವಿಸಿದ ಸೈನಿಕರ ನೆರವಿನಿಂದ ಬದುಕಿ ಬಂದಿದ್ದ ಹನುಮಂತಪ್ಪ ಕೊಪ್ಪದ ನೆನಪಾದ. ಕಾರ್ಗಿಲ್ ದಿನದ ಆಚರಣೆ, ನೆನಪು ಎಂದಾಗ ಸಿಯಾಚಿನ್ ಗಡಿ ಕಾಯಲು, ತಮ್ಮ ಜೀವವನ್ನು ಒತ್ತೆಯಿಟ್ಟು ಆ ಚಳಿಗಾಳಿಯಲ್ಲಿ ಗಸ್ತು ತಿರುಗುವ ಸೈನಿಕರು ನೆನಪಾಗಲೇಬೇಕು, ನೆನಪಿಸಿಕೊಳ್ಳಲೇಬೇಕು. ನಮಗಿಲ್ಲಿ ಕೆಲವು ವಾರಗಳ ಲಾಕ್‌ಡೌನ್ ಅಸಹನೀಯ ಎನಿಸಿದರೆ, ಅಲ್ಲಿ ವರ್ಷವಿಡೀ ಲಾಕ್‌ಡೌನ್, ಹಿಮಶೀತಲ ನೆಲ, ಕೊರೆಯುವ ಗಾಳಿ, ಬಿಸಿಯೂಟವು ಕ್ಷಣ ಮಾತ್ರದಲ್ಲಿ ತಣ್ಣಗಾಗುವ ಸಿಯಾಚಿನ್ ಗಡಿಯ ವಾತಾವರಣದಲ್ಲಿ ದುಡಿಯುವ ಆ ಜವಾನರಿಂದಲೇ ನಮ್ಮ ದೇಶ ಉಳಿದಿದೆ, ಸ್ವಾಭಿಮಾನ ಮೆರೆದಿದೆ. ಜೈ ಜವಾನ್॥

**ಲೇಖಕರು:- ಮಂಜುಳಾ ಡಿ,**

**ಆಧಾರ:ವಿಜಯವಾಣಿ, ದಿನಾಂಕ:26.07.2020**